# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 359

2) ಸದಸ್ಯರ ಹೆಸರು : ಡಾ|| ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು)

3) ಉತ್ತರಿಸಬೇಕಾದ ದಿನಾಂಕ : 21-12-2022

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಯಾದಗಿರಿ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಹತ್ತಿಕುಣಿ ಜಲಾಶಯದ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಶ್ರೀ ದುರ್ಗಾದೇವಿ ಭೋವಿರಾಜ್ ಮೀನುಗಾರರ ಸಹಕಾರ ಸಂಘ (ನಿ) ಯಾದಗಿರಿ ಇವರಿಗೆ ನೀಡಿ ಮತ್ತೆ ಆದೇಶವನ್ನು ವಾಪಸ್ಸು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಈ ಜಲಾಶಯದ ಮೀನು ಪಾಶುವಾರು ಹಕ್ಕು ಪತ್ರ ನೀಡಿ ಅದಕ್ಕೆ ಬೇಕಾದ ಹಣ ತುಂಬಿಸಿಕೊಂಡು ಧಿಡೀರನೆ ಆದೇಶವನ್ನು ರದ್ದು ಪಡಿಸಿರುವುದು ಸಾಂಪ್ರಾದಾಯಿಕ ಮೀನುಗಾರರಿಗೆ ಮಾಡಿದ ಅನ್ಯಾಯವಲ್ಲವೆ; | ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/8/ ಮೀಇಇ/2015 ದಿನಾಂಕ: 26-06-2015 ರಂತೆ ಗುತ್ತಿಗೆ ಕಾರ್ಯನೀತಿ-2014 ಕ್ಕೆ ತಿದ್ದುಪಡಿ ತಂದಿದ್ದು, ಅದರಂತೆ, 2015-16 ನೇ ಸಾಲಿನ ಫಸಲಿ ವರ್ಷದಿಂದ ಅನ್ವಯವಾಗುವಂತೆ 3ನೇ ಕೆರೆ ಅಥವಾ 3ನೇ ನದಿ ಭಾಗದ ಕಾರ್ಯವ್ಯಾಪ್ತಿಯ ಗ್ರಾಮದಲ್ಲಿ ಆ ಸಂಘದ ಸಕ್ರಿಯ ಮೀನುಗಾರರು ಸದಸ್ಯರಿದ್ದಲ್ಲಿ ಮಾತ್ರ 3ನೇ ಜಲಸಂಪನ್ಮೂಲವನ್ನು ಪಡೆಯಲು ಅವಕಾಶ ವಿರುತ್ತದೆ. ಅಲ್ಲದೇ ಕೇಂದ್ರ ಕಛೇರಿಯ ಸಾಧ್ಯತಾ ವರದಿ ಪಡೆಯದೆ ಕೇವಲ ಮೀನುಗಾರಿಕೆ ಸಹಾಯಕ ನಿರ್ದೇಶಕರ ಶಿಫಾರಸ್ಸಿನ ಮೇರೆಗೆ ಶ್ರೀ ದುರ್ಗಾದೇವಿ ಭೋವಿರಾಜ್ ಮೀನುಗಾರರ ಸಹಕಾರ ಸಂಘ (ನಿ) ಯಾದಗಿರಿ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲಾಗಿದ್ದು, ಸದರಿ ತಿದ್ದುಪಡಿಯನ್ನು ಕಾನೂನಾತ್ಮಕವಾಗಿ ಒಪ್ಪಲು ಬರುವುದಿಲ್ಲ. ಆದುದರಿಂದ ಶ್ರೀ ದುರ್ಗಾದೇವಿ ಭೋವಿರಾಜ್ ಮೀನುಗಾರರ ಸಹಕಾರ ಸಂಘ (ನಿ) ಯಾದಗಿರಿ ಸಂಘಕ್ಕೆ ಹತ್ತಿಕುಣಿ ಜಲಾಶಯದ ಮೀನು ಪಾಶುವಾರು ಹಕ್ಕನ್ನು ನೀಡಿದ್ದ ಆದೇಶವನ್ನು ರದ್ದುಪಡಿಸಲಾಗಿದೆ. |

| | | |
|---|---|---|
| ಇ) | ಯಾದಗಿರಿ ಜಿಲ್ಲೆಯಲ್ಲಿನ ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕರು ರೂ.1.00 ಲಕ್ಷ ಹಣದ ಬೇಡಿಕೆ ಇಟ್ಟಿದ್ದಾರೆಯೇ; ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಬರವಣಿಗೆಯಲ್ಲಿ ಆರೋಪ ಮಾಡಿರುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳದಿರಲು ಕಾರಣವೇನು; | ಶ್ರೀ ದುರ್ಗಾದೇವಿ ಭೋವಿರಾಜ್, ಮೀನುಗಾರರ ಸಹಕಾರ ಸಂಘ, ಯಾದಗಿರಿ ಇವರಿಗೆ ಯಾದಗಿರಿ ತಾಲ್ಲೂಕಿನ ಹತ್ತಿಕುಣಿ ಜಲಾಶಯವು ತಮ್ಮ ಸಂಘಕ್ಕೆ ಆದೇಶವಾಗಿದ್ದು, ಮೀನುಗಾರಿಕೆ ಉಪ ನಿರ್ದೇಶಕರು, ಯಾದಗಿರಿ ಇವರು ಯಾವುದೋ ಆಮಿಷಕ್ಕೆ ಒಳಗಾಗಿ ಅಥವಾ ರಾಜಕೀಯ ವ್ಯಕ್ತಿಗಳ ಒತ್ತಡಕ್ಕೆ ಒಳಗಾಗಿ ಆದೇಶವನ್ನು ರದ್ದುಪಡಿಸಲು ಮೇಲಾಧಿಕಾರಿಗಳಿಗೆ ಪತ್ರ ಬರೆದಿದ್ದು, ಸದರಿ ಹತ್ತಿಕುಣಿ ಜಲಾಶಯವನ್ನು ರದ್ದು ಮಾಡಬಾರದೆಂದು ಮನವಿಯನ್ನು ಸಲ್ಲಿಸಿದ್ದರು ಹಾಗೂ ತಪ್ಪು ಮಾಹಿತಿಯನ್ನು ನೀಡಿ, ಕಿರುಕುಳ ಕೊಟ್ಟು, ಹಣ ನೀಡುವಂತೆ ಬೇಡಿಕೆ ಇಟ್ಟಿರುವ ಕುರಿತು ಸೂಕ್ತ ತನಿಖೆ ನಡೆಸಿ ಅಗತ್ಯ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ದೂರನ್ನು ನೀಡಿರುವ ಮೇರೆಗೆ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಯಾದಗಿರಿ ರವರಿಗೆ ಮನವಿಯಲ್ಲಿನ ವಿಷಯದ ಕುರಿತು ತನಿಖೆ ನಡೆಸಿ, ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಕೋರಲಾಗಿರುತ್ತದೆ ಹಾಗೂ ಸದರಿ ಅಧಿಕಾರಿಯನ್ನು ಬೇರೆ ಸ್ಥಳಕ್ಕೆ ವರ್ಗಾಯಿಸಲಾಗಿರುತ್ತದೆ. ಈ ಕುರಿತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಯಾದಗಿರಿ ರವರು ಸದರಿ ದೂರಿನ ತನಿಖೆ ಕೈಗೊಂಡು ವರದಿ ಸಲ್ಲಿಸಲು ಹೊಸದಾಗಿ ವರದಿ ಮಾಡಿಕೊಂಡ ಉಪ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಯಾದಗಿರಿ ರವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿ, ಪ್ರಕರಣದ ಕುರಿತು ಕೂಲಂಕುಷ ತನಿಖೆ ಕೈಗೊಂಡು ಸೂಕ್ತ ದಾಖಲೆಗಳೊಂದಿಗೆ ಕೂಡಲೇ ವರದಿಯನ್ನು ಸಲ್ಲಿಸಲು ಸೂಚಿಸಿರುತ್ತಾರೆ. |
| ಈ) | ಸದರಿ ಅಧಿಕಾರಿಯನ್ನು ಇಲಾಖಾಧಿಕಾರಿಗಳು ಹಾಗೂ ಸ್ಥಳೀಯ ಮುಖಂಡರು ರಕ್ಷಣೆ ಮಾಡುತ್ತಿರುವುದರಿಂದ ಬಡ ಸಂಪ್ರಾದಾಯಿಕ ಮೀನುಗಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ದೂರು ಅರ್ಜಿಯ ಮೇರೆಗೆ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ ರವರು ಉಪ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಯಾದಗಿರಿ ರವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿ, ಪ್ರಕರಣದ ಕುರಿತು ಕೂಲಂಕುಷ ತನಿಖೆ ಕೈಗೊಂಡು ಸೂಕ್ತ ದಾಖಲೆಗಳೊಂದಿಗೆ ಕೂಡಲೇ ವರದಿಯನ್ನು ಸಲ್ಲಿಸಲು ಸೂಚಿಸಿರುತ್ತಾರೆ. ಅಧಿಕಾರಿಯು ತಪ್ಪಿತಸ್ಥ ಎಂದು ಸಾಬೀತಾದಲ್ಲಿ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು. |

| | | |
|---|---|---|
| ಉ) | ಶ್ರೀ ದುರ್ಗಾದೇವಿ ಭೋವಿರಾಜ್ ಮೀನುಗಾರರ ಸಹಕಾರ ಸಂಘದವರು ಕೇವಲ 140 ಹೆಕ್ಟೇರ್ ಜಲಾಶಯದಲ್ಲಿ ಮೀನುಗಾರಿಕೆ ಮಾಡುತ್ತಿದ್ದು, 300 ಹೆಕ್ಟೇರ್ ವರೆಗೆ ಮೀನುಗಾರಿಕೆ ಮಾಡಲು ಕಾನೂನು ಪ್ರಕಾರ ಅವಕಾಶವಿಲ್ಲವೇ ? | ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಪಸಂಮೀ /45/ಮೀಇಇ/2014 ದಿನಾಂಕ: 27-08-2014 ರಲ್ಲಿ ಪ್ರತಿ ಅರ್ಹ ಮೀನುಗಾರರ ಸಹಕಾರ ಸಂಘಕ್ಕೆ ಅದರ ಕಾರ್ಯವ್ಯಾಪ್ತಿಯಲ್ಲಿ ಗರಿಷ್ಟ 300 ಹೆಕ್ಟೇರ್ ಜಲ ವಿಸ್ತೀರ್ಣಕ್ಕೆ ಮೀರದಂತೆ ಗರಿಷ್ಟ 3ನೇ ಕೆರೆ ಅಥವಾ ಒಂದು ಜಲಾಶಯ ಅಥವಾ 3ನೇ ನದಿ ಭಾಗ ಗುತ್ತಿಗೆ ಪಡೆಯಲು ಅರ್ಹತೆಯನ್ನು ಹೊಂದಿರುತ್ತದೆ. ನಿಯಮಾನುಸಾರ ಅವರ ಕಾರ್ಯವ್ಯಾಪ್ತಿಯಲ್ಲಿ ಬರುವ ಜಲ ಸಂಪನ್ಮೂಲಗಳನ್ನು ಪಡೆಯಲು ಅವಕಾಶವಿದೆ. |

ಸಂಖ್ಯೆ: ಪಸಂಮೀ ಇ-260 ಮೀಇಯೋ 2022

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು
ಕರ್ನಾಟಕ ಸರ್ಕಾರ